ಕರ್ನಾಟಕ ವಿಧಾನ ಪರಿಷತ್ತು
143 ನೇ ಅಧಿವೇಶನ 2021

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1041 (8/5)
ಮಾನ್ಯ ಸದಸ್ಯರ ಹೆಸರು	: ಕೆ. ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ	: 10-03-2021
ಉತ್ತರಿಸುವ ಸಚಿವರು	: ಮಾನ್ಯ ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ

ಕ್ರ ಸಂ	ಪ್ರಶ್ನೆಗಳು	ಉತ್ತರ
ಅ)	ಮದ್ದೂರು ಮೂಲಕ ಶಿವಪುರದಿಂದ ಕೊಪ್ಪಗೆ ಹೋಗುವ ಮುಖ್ಯ ರಸ್ತೆ ಗುಂಡಿ ಬಿದ್ದು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮದ್ದೂರು ಮೂಲಕ ಶಿವಪುರದಿಂದ ಕೊಪ್ಪಗೆ ಹೋಗುವ ಮದ್ದೂರು ನಾಗಮಂಗಲ (ಜಿಲ್ಲಾ ಮುಖ್ಯ ರಸ್ತೆ) ರಸ್ತೆಯು ಹಾಳಾಗಿರುವುದು ಗಮನಕ್ಕೆ ಬಂದಿರುತ್ತದೆ.
ಆ)	ಅನೇಕ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆ ಅನೇಕ ವರ್ಷಗಳಿಂದ ಹಾಳಾಗಿದ್ದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಬಂದಿರುತ್ತದೆ. ಸದರಿ ರಸ್ತೆಯನ್ನು ಆಯ್ದ ಭಾಗಗಳಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ವತಿಯಿಂದ ಅಭಿವೃದ್ಧಿಪಡಿಸಲಾಗುತ್ತಿದೆ. ಪ್ಯಾಕೇಜ್ 330 (ಎ) ಮಂಡ್ಯ ಜಿಲ್ಲೆ, ಮದ್ದೂರು ಮತ್ತು ನಾಗಮಂಗಲ ತಾಲ್ಲೂಕು ವ್ಯಾಪ್ತಿಗೆ ಬರುವ ಮದ್ದೂರು-ನಾಗಮಂಗಲ ರಸ್ತೆ (ಜಿಲ್ಲಾ ಮುಖ್ಯ ರಸ್ತೆ) ಸರಪಳಿ 0.94 ಕಿ.ಮೀ ರಿಂದ 3.18 ಕಿ.ಮೀವರೆಗೆ, 5.04 ಕಿ.ಮೀ ರಿಂದ 6.45 ಕಿ.ಮೀವರೆಗೆ, 7.69 ಕಿ.ಮೀ ರಿಂದ 12.10 ಕಿ.ಮೀ ವರೆಗೆ, 13.18 ಕಿ.ಮೀ ರಿಂದ 14.85 ಕಿ.ಮೀವರೆಗೆ, 15.62 ಕಿ.ಮೀ ರಿಂದ 16.90 ಕಿ.ಮೀ ವರೆಗೆ, 20.42 ಕಿ.ಮೀ ರಿಂದ 20.87 ಕಿ.ಮೀ ವರೆಗೆ, 24.10 ಕಿ.ಮೀ ರಿಂದ 26.16 ಕಿ.ಮೀ ವರೆಗೆ ವರೆಗೆ ಒಟ್ಟು 14.26 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು ಇದುವರೆವಿಗೂ ಭೌತಿಕವಾಗಿ 3.77 ಕಿ.ಮೀ ರಸ್ತೆ ಕಾಮಗಾರಿ ಪೂರ್ಣಗೊಂಡಿರುತ್ತದೆ.
ಇ)	ಬಂದಿದ್ದಲ್ಲಿ, ಈ ರಸ್ತೆ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ?	
ಈ)	ಈ ರಸ್ತೆ ಕಾಮಗಾರಿಗೆ ಅನುಮೋದನೆ ದೊರಕಿದೆಯೇ; ಇಲ್ಲವಾದಲ್ಲಿ, ಯಾವಾಗ ಅನುಮೋದನೆ ದೊರೆಯುವುದು? (ವಿವರ ನೀಡುವುದು)	ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ-4 ರ ಪ್ಯಾಕೇಜ್ 330 (ಎ) ರಡಿ ಸದರಿ ರಸ್ತೆಯ ಒಟ್ಟು 14.26 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ರೂ.918.83 ಲಕ್ಷಗಳ ಗುತ್ತಿಗೆ ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದ್ದು, ಇದುವರೆವಿಗೂ 3.77 ಕಿ.ಮೀ ರಸ್ತೆ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಸಂಖ್ಯೆ ಲೋಇ E- 94 ಇಪಿ 2021

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ